[Govt. of Karnataka C.R.P. 67]

| Deposition Sheets<br>(RP.No.57)<br>Form No.4 (Civil) | IN THE COURT OF CIVIL JUDGE & J.M.F.C., KARKALA.<br><br>Criminal Case No. 955/2024<br><br>.................................................Vs.................................... |
|---|---|

ಸಾಕ್ಷಿದಾರನ ಹೆಸರು ಃ ಶ್ರೀಧರ್ ಯು. ಪಿ.ಡಬ್ಲ್ಯೂಃ 10

ತಂದೆಯ ಹೆಸರುಃ ರಾಮ ಸಿ.ಡಬ್ಲ್ಯೂಃ 27

ಪ್ರಾಯ ಃ 59 ವರ್ಷ

ಉದ್ಯೋಗ ಃ ಎ.ಎಸ್.ಐ. ಹೆಬ್ರಿ ಪೋಲಿಸ್ ಠಾಣೆ

ವಾಸ ಃ ಹೆಬ್ರಿ

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು. ದಿಃ 26-02-2026

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ನಾನು 2021 ರಿಂದ ಹೆಬ್ರಿ ಪೋಲಿಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 28-01-2024 ರಂದು ಮೃತ ಶಾಂತಮ್ಮ ರವರ ಶವ ಮಹಜರು ನಡೆಸಿ, ಮೃತ ಶರೀರವನ್ನು ಚಾಸಾ-24 ರವರ ಮೂಲಕ ಮೃತರ ರಕ್ತ ಸಂಬಂಧಿಕರಿಗೆ ಬಿಟ್ಟು ಕೊಟ್ಟಿರುತ್ತೇನೆ. ಅದೇ ದಿನ ಮಣಿಪಾಲ ಕೆ.ಎಮ್.ಸಿ ಆಸ್ಪತ್ರೆಯಲ್ಲಿ ಹೊರರೋಗಿಯಾಗಿ ದಾಖಲಾಗಿದ್ದ ಚಾಸಾ-3 ರಿಂದ ಚಾಸಾ-5 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಸಾಕ್ಷಿಯು ನಿಪಿ.17 ರಲ್ಲಿರುವ ತನ್ನ ಸಹಿಯನ್ನು ನೋಡೀಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಶವ ಮಹಜರು ವೇಳೆ ತೆಗೆದ ಭಾವಚಿತ್ರ ನಿಪಿ-18 ನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಪಿ.ಎ.ಎಸ್. ವಕೀಲರಿಂದಃ

ಚಾಸಾ-3 ರಿಂದ ಚಾಸಾ-5 ರವರು ಹೊರರೋಗಿಯಾಗಿ ದಾಖಲಾಗಿದ್ದು, ನಾನು ಹೇಳಿಕೆಯನ್ನು ದಾಖಲಿಸುವ ಸಮಯದಲ್ಲಿ ವಾರ್ಡ್ ನಲ್ಲಿ ಇರಲಿಲ್ಲ.

ನಾನು ದಾಖಲಿಸಿದ್ದೇನೆ ಎಂದು ಹೇಳುವ ಹೇಳಿಕೆಗಳಲ್ಲಿ ಚಾಸಾ-3 ರಿಂದ ಚಾಸಾ-5 ರವರು ಆಸ್ಪತ್ರೆಯ ಯಾವ ವಾರ್ಡ್ ನಲ್ಲಿ, ಸ್ಥಳದಲ್ಲಿ ಇದ್ದರ ಎಂದು ಕಾಣಿಸಿರುವುದಿಲ್ಲ. ಚಾಸಾ-3 ರಿಂದ ಚಾಸಾ-5 ರವರು ಹೊರರೋಗಿಯಾಗಿ ಚಿಕಿತ್ಸೆ ಪಡೆದಿರುತ್ತಾರೆ ಎಂದು ಹೇಳಿಕೆಗಳಲ್ಲಿ ಕಾಣಿಸಿರುವುದಿಲ್ಲ. ನಾನು ಚಾಸಾ-3 ರವರಿಂದ ಚಾಸಾ-5 ರವರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿದ್ದ ಸಾಕ್ಷಿದಾರರ ಹೆಸರು, ವಿಳಾಸ ಪಡೆದುಕೊಂಡು ಠಾಣೆಯಲ್ಲಿ ಕುಳಿತು ಹೇಳಿಕೆಗಳನ್ನು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಒಬ್ಬರ ಹೇಳಿಕೆ ದಾಖಲಿಸಲು 10 ನಿಮಿಷ ಆಗಿರುತ್ತದೆ. ಮೂರು ಜನ ಸಾಕ್ಷಿದಾರರು ಒಂದೇ ಸ್ಥಳದಲ್ಲಿದ್ದರು. ಎಲ್ಲಾ ಸಾಕ್ಷಿದಾರರ ಹೇಳಿಕೆಯಲ್ಲಿ ಸಮಯವನ್ನು ಒಂದೇ ರೀತಿ ಕಾಣಿಸಿದ್ದು, ಠಾಣೆಯಲ್ಲಿ ಕುಳಿತು ಹೇಳಿಕೆಗಳನ್ನು ತಯಾರಿಸಿದ್ದರಿಂದ ಈ ರೀತಿಯಾಗಿ ಹೇಳಿಕೆಗಳಲ್ಲಿ ಬಂದಿರುತ್ತದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಹೆ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ